**ಮರು ಪ್ರಮಾಣೀಕರಿಸಲಾದ ದಿನಾಂಕ : 06.08.2026.**

**<u>ಪಾಟೀ ಸವಾಲು : ಪ್ರತಿವಾದಿ ಪರ ಶ್ರೀಮತಿ. M.S.K ವಕೀಲರಿಂದ :-</u>**

ದಾವಾ ಸ್ವತ್ತುಗಳು ಪ್ರತಿವಾದಿಗಳ ಹೆಸರಿನಲ್ಲಿ ರಾಜಸ್ವ ದಾಖಲಾತಿಗಳು ಬರುತ್ತಿದ್ದು ಅದು ನಮಗೆ ನಮ್ಮ ತಾತನವರ ಮೂಲಕ ವಿಭಾಗದಲ್ಲಿ ಬಂದಿರುತ್ತದೆ. ಆದ ಕಾರಣ ರಾಜಸ್ವ ದಾಖಲಾತಿಗಳು ನಮ್ಮ ಹೆಸರಿಗೆ ಮಾಡಿ ಕೊಡಬೇಕೆಂದು ಈ ದಾವೆಗೆ ಹೂಡಿರುತ್ತೇನೆ. ನನ್ನ ತಾತನ ಹೆಸರು ವೀರಪ್ಪ. ಅವರು ದತ್ತು ಹೋಗಿದ್ದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. AC ನ್ಯಾಯಾಲಯದ ಮುಂದೆ ಈ ದಾವೆಗೆ ಸಂಬಂಧಪಟ್ಟ ಹಾಗೇ ದಾವೆಯನ್ನು ಹೂಡಿದ್ದೆ ಎಂದರೆ ಸರಿ. AC ನ್ಯಾಯಾಲಯದಲ್ಲಿ ಸದರಿ ವಿಭಾಗಪತ್ರವು ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳುವಂತೆ ವಜಾ ಆಗಿರುತ್ತದೆ ಎಂದರೆ ಸರಿ. ಸದರಿ ನೋಂದಾಯಿತ ಪಾಲುಪಟ್ಟಿಯು 1975 ನೇ ಇಸವಿಯಲ್ಲಿ ಮಾಡಲಾಗಿರುತ್ತದೆ. ಕಲ್ಲಯ್ಯ ಎಂದರೆ ನನ್ನ ತಾತನವರ ಅಣ್ಣನಾಗಬೇಕು. ಈ ಹಂತದಲ್ಲಿ ಸಾಕ್ಷಿಗೆ ನಿಪಿ-1 ರ ದಾಖಲಾತಿ ತೋರಿಸಿದ್ದು ಅದನ್ನು ನೋಡಿ ತಾವು ಹಾಜರುಪಡಿಸಿರುವ ಪಾಲುಪಟ್ಟಿ ಅದೇ ಎಂದು ಗುರುತಿಸಿರುತ್ತಾರೆ. ಕಲ್ಲಯ್ಯ, ತೋಪಯ್ಯ ಹಾಗೂ ಬೀರಯ್ಯನವರ ನಡುವೆ ಒಟ್ಟು ಕುಟುಂಬದ ಆಸ್ತಿಯ ವಿಭಾಗವಾಗಿರುತ್ತದೆ ಎಂದರೆ ಸರಿ. ಸದರಿ ಬೀರಯ್ಯನವರು ದತ್ತು ಹೋಗುವ ಕಾರಣ ಕೇವಲ ರಕ್ತ ಸಂಬಂಧ ಮಾತ್ರ ಹಕ್ಕು ಸಂಬಂಧ ಇರುವುದಿಲ್ಲ ಎಂದರೆ - ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಬೀರಯ್ಯನವರಿಗೆ ನಾನು ಮೊಮ್ಮಗನಾಗಬೇಕು. ನನ್ನ ತಂದೆಗೆ ನಾನು ದತ್ತು ಪುತ್ರನಾಗಬೇಕು. ನಿಮ್ಮ ವಾದಪತ್ರದಲ್ಲಿ ಹೇಳಿರುವ ಹಾಗೇ ಸದರಿ ವಿಭಾಗವನ್ನು **Fragmentation Act** ಅಡಿಯಲ್ಲಿ ಮಾಡಿಕೊಂಡಿರಲಾಗಿರುತ್ತದೆ ಎಂಬುವ ಸಂಗತಿ ಸತ್ಯ. ನನ್ನ ನಿಜವಾದ ತಂದೆಯ ಹೆಸರು ಹಿರಿಯಣ್ಣ. ಹಿರಿಯಣ್ಣನವರು ಬೀರಯ್ಯನವರಿಗೆ 3ನೇ ಮಗನಾಗಬೇಕು. ನಮ್ಮ ಜಮೀನಿನ ಸರ್ವೆ ನಂಬರ್ಃ 63/3 ಆಗಿರುತ್ತದೆ. ಸರ್ವೆ ನಂಬರ್ಃ 63 ರ ಒಟ್ಟು ವಿಸ್ತೀರ್ಣವು 4 ಎಕರೆ 23 ಗುಂಟೆ ಆಗಿರುತ್ತದೆ. ಅದರ ಪೈಕಿ 35 ಗುಂಟೆಯ ಹೇಮಾವತಿ ಚಾನೆಲ್‌ಗೆ ಹೋಗಿರುತ್ತದೆ ಎಂದರೆ ಸರಿ. ಸದರಿ 35 ಗುಂಟೆಯು ನನ್ನ ತಾತನವರ 2ನೇ ಅಣ್ಣನವರಾದ ತೋಪಯ್ಯನವರ ಭಾಗಕ್ಕೆ ಬಂದಿರುತ್ತದೆ. ಸರ್ಕಾರದಿಂದ ಅದಕ್ಕೆ ಸಂಬಂಧಪಟ್ಟ ಪರಿಹಾರವನ್ನು ತೋಪಯ್ಯನವರ ಮಕ್ಕಳು ಪಡೆದುಕೊಂಡಿರುತ್ತಾರೆ. ಈಗ ದಾವಾ ಸ್ವತ್ತು

ಸರ್ವೆ ನಂಬರ್‌ಃ 63/3ಎ, 63/3ಬಿ ಎಂದು ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂಬರ್‌ಃ 63/3ಎ ಮತ್ತು 63/3ಬಿ ರಲ್ಲಿ ವೀರಪ್ಪನವರಿಗೆ ಬಂದಿರತಕ್ಕಂತಹ ದಾವಾ ಸ್ವತ್ತು ಯಾವುದರಲ್ಲಿ ಬರುತ್ತದೆ ಎಂಬುದು ನನಗೆ ಸರಿಯಾಗಿ ತಿಳಿದಿಲ್ಲ. ಕಲ್ಲಯ್ಯನವರ ಪಾಲಿಗೆ ಬಂದಂತಹ ಆಸ್ತಿಯು ಇಂದಿಗೂ ಸಹ ಅವರ ಹೆಸರಿನಲ್ಲೇ ರಾಜಸ್ವ ದಾಖಲಾತಿಗಳು ಬರುತ್ತಿದ್ದು ಅವರ ಮಕ್ಕಳ ಹೆಸರಿಗೆ ಹೋಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ಪಾಲುಪಟ್ಟಿಯಲ್ಲಿ ತೋರಿಸಿರುವಷ್ಟು ಜಮೀನು ಅಲ್ಲಿ ಇರುವುದಿಲ್ಲ ಎಂದರೆ ಸರಿ. ನಮ್ಮ ಪಾಲಿಗೆ ಬಂದಂತಹ ಸ್ವತ್ತಿನಲ್ಲಿ ನಾವು ಸ್ವಾಧೀನಾನುಭವದಲ್ಲಿ ಇದ್ದೇವೆ ಎಂದರೆ ಸರಿ. ಕಲ್ಲಯ್ಯನ ಮಗ ತೋಪಯ್ಯ ಎಂಬುವವರು ಇದ್ದಾರೆ ಎಂದರೆ ಸರಿ. ಅವರು ಈಗ ಮರಣ ಹೊಂದಿರುತ್ತಾರೆ. ತೋಪಯ್ಯನವರಿಗೆ ಬಂದಿರತಕ್ಕಂತಹ ಸ್ವತ್ತನ್ನು ನೀವು ಅವರ ಮಕ್ಕಳಿಗೆ ಹೋಗಲು ಬಿಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಬೀರಯ್ಯನವರು ದತ್ತು ಹೋಗುವ ಸಂಬಂಧ ಯಾವುದೇ ಕುಟುಂಬದ ಆಸ್ತಿಯಲ್ಲಿ ಭಾಗಾಂಶ ಬೇಡ ಎಂದು ಹೇಳಿ ಹಕ್ಕು ಖುಲಾಸೆ ಪತ್ರವನ್ನು ಬರೆದು ಕೊಟ್ಟಿರುತ್ತಾರೆ (release deed) ಎಂದರೆ - ಸರಿ. ಆದರೆ ಅದರ ದಿನಾಂಕ ನನಗೆ ತಿಳಿದಿಲ್ಲ. ತಿಪಟೂರಿನ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯದಲ್ಲಿ 5 ರಿಂದ 8ನೇ ಪ್ರತಿವಾದಿಗಳು ದಾವಾ ಸ್ವತ್ತಿಗೆ ಸಂಬಂಧಪಟ್ಟ ಹಾಗೇ ಮತ್ತೊಂದು ದಾವೆಯನ್ನು ವಾದಿಗಳ ವಿರುದ್ಧ ಹೂಡಿದ್ದಾರೆ ಎಂದರೆ ಸರಿ. ಈಗ ಪ್ರಸ್ತುತ ದಾವೆಯಲ್ಲಿ 2 ರಿಂದ 7ನೇ ವಾದಿಗಳನ್ನು ಸೇರಿಸಿಕೊಂಡು ಅದೇ ದಾವಾ ಸ್ವತ್ತಿನ ಮೇಲೆ ಹೂಡಿರುತ್ತಾರೆ ಎಂದರೆ ಸರಿ. ನೀವು ನ್ಯಾಯಾಲಯದ ಶುಲ್ಕವನ್ನು ಕಟ್ಟಿದ್ದೀರಾ? ಎಂದು ಕೇಳಿದಾಗ ಅದು ನಮ್ಮ ವಕೀಲರಿಗೆ ತಿಳಿದಿರುತ್ತದೆ ಎಂದು ನುಡಿಯುತ್ತಾರೆ. ವಿಭಾಗದ ಮುಖಾಂತರ ಬಂದಿರತಕ್ಕಂತಹ ಸ್ವತ್ತು ಕಲ್ಲಯ್ಯನವರಿಗೆ ಬಂದಿರತಕ್ಕಂತಹ ಸ್ವತ್ತಾಗಿದ್ದು ಅದು ಅವರ ಗೈರು ಹಾಜರಿನ ಸಮಯದಲ್ಲಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ಕಲ್ಲಯ್ಯನವರು ರುಜುವನ್ನು ಮಾಡುತ್ತಿರಲಿಲ್ಲ, ಹೆಬ್ಬೆಟ್ಟನ್ನು ಹಾಕುತ್ತಿದ್ದರು ಎಂದರೆ - ನನಗೆ ತಿಳಿದಿಲ್ಲ. ನೀವು ಬೀರಯ್ಯನವರಿಗೆ ದತ್ತು ಹೋಗಿದ್ದರೂ ಸಹ ಕಲ್ಲಯ್ಯನವರ ಆಸ್ತಿಯಲ್ಲಿ ಅವರ ಮಕ್ಕಳಿಗೆ ಯಾವುದೇ ಆಸ್ತಿ ಸೇರುವುದಕ್ಕೆ ಬಿಡದಂತೆ ದುರುದ್ದೇಶದಿಂದ ಈ ಪ್ರಸ್ತುತ ದಾವೆಯನ್ನು ಹೂಡಿದ್ದೀರ - ಎಂದರೆ ಸರಿಯಲ್ಲ.

**OS.544/2024** **PW – 1**

**<u>ಮರು ವಿಚಾರಣೆ : ಇರುವುದಿಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**SD/-**

**ಅಪರ ಸಿವಿಲ್ ನ್ಯಾಯಾಧೀಶರು, ತಿಪಟೂರು.**